# ಸಂಸತ್ತಿನಲ್ಲಿ ತಾರೆಯರು!

ರಾಜಕಾರಣ ಮತ್ತು ಕ್ರಿಕೆಟ್ ಎರಡರ ಜೊತೆಗೂ ಬಾಲಿವುಡ್‌ಗೆ ಅವಿನಾಭಾವ ನಂಟು.ಈ ಬಾರಿ ಸಂಸತ್ತಿನಲ್ಲಿ ಬಿ-ಟೌನ್ ಮಂದಿಯ ಬಲ ಹೆಚ್ಚಿದೆ. ಅದರ ಹೊರಗೆ ಸೋಲಿನ ರುಚಿ ಕಂಡವರ ಸಂಖ್ಯೆಯೂ ಕಡಿಮೆಯಿಲ್ಲ. ಚಿತ್ರರಂಗದ ಹೊಸ್ತಿಲು ದಾಟಿ ರಾಜಕಾರಣದಲ್ಲಿ ತೊಡಗಿಕೊಳ್ಳಲು ಬಂದವರು ಕೆಲವರಾದರೆ, ಇನ್ನು ಕೆಲವರದು ಸಿನಿಮಾ ಬಿಟ್ಟಿರಲಾರದೆಯೂ ರಾಜಕಾರಣವನ್ನು ಅಪ್ಪಿಕೊಳ್ಳುವ ಮನಸ್ಥಿತಿ. ಗೆಲುವು ಕಂಡಿದ್ದರೂ ಅದು ಅವರ 'ಸ್ಟಾರ್'ಗಿರಿಯಿಂದಲ್ಲ ಎನ್ನುವುದೂ ವೇದ್ಯ.



ಕಿರಣ್ ಖೇರ್

ಏಕೆಂದರೆ ಗೆದ್ದ ತಾರೆಯರ ಪೈಕಿ ಮೂನ್‌ಮೂನ್ ಸೇನ್ ಹೊರತು-ಪಡಿಸಿದರೆ ಉಳಿದೆಲ್ಲರೂ ಬಿಜೆಪಿಯಿಂದ ಸ್ಪರ್ಧಿಸಿರುವವರು. ಆ ಗೆಲುವುಗಳನ್ನು ಅವರು ಸ್ವಸಾಮರ್ಥ್ಯದಿಂದ ಪಡೆದದ್ದು ಎನ್ನುವಂತಿಲ್ಲ. ಟಿಎಂಸಿಯಿಂದ ಸ್ಪರ್ಧಿಸಿದ್ದ ಮೂನ್ ಮೂನ್ ಸೇನ್ ಗೆಲುವಿಗೆ ಮಮತಾ ಬ್ಯಾನರ್ಜಿ ಪ್ರಭಾವಳಿಯೂ ಕಾರಣ.

ಆಗಲೇ ರಾಜಕಾರಣದಲ್ಲಿ ನೆಲೆಕಂಡಿರುವ ಶತ್ರುಘ್ನ ಸಿನ್ಹಾರಿಗೆ ಈ ಬಾರಿಯ ಚುನಾವಣೆ ದೊಡ್ಡ ಸವಾಲೇನೂ ಆಗಿರಲಿಲ್ಲ. ಬಿಜೆಪಿಯಿಂದ ಎರಡು ಬಾರಿ ರಾಜ್ಯಸಭೆಗೆ ಆಯ್ಕೆಯಾಗಿ, ಅಲ್ಪಕಾಲ ಕೇಂದ್ರ ಸಚಿವರಾಗಿಯೂ ಕೆಲಸ ಮಾಡಿದ್ದ ಸಿನ್ಹಾ, 2009ರಲ್ಲಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿದ್ದವರು. ಪಟ್ನಾ ಸಾಹಿಬ್ ಕ್ಷೇತ್ರ ಮತ್ತೊಮ್ಮೆ ಸಿನ್ಹಾರ ಕೈ ಹಿಡಿದಿದೆ.

ಗ್ಲಾಮರ್ ತೆರೆಯ ಮೇಲೆ ಮಾತ್ರವಲ್ಲ, ರಾಜಕಾರಣದಲ್ಲಿಯೂ ಕೆಲಸ ಮಾಡುತ್ತದೆ ಎನ್ನುವುದಕ್ಕೆ ಉದಾಹರಣೆಯಾಗಿ ಕಾಣಿಸುತ್ತಿರುವವರು ನಟಿ ಮೂನ್ ಮೂನ್ ಸೇನ್. ಬಂಕುರಾ ಕ್ಷೇತ್ರದಿಂದ ತೃಣಮೂಲ ಕಾಂಗ್ರೆಸ್‌ನಿಂದ ಮೊದಲ ಬಾರಿಗೆ ಕಣಕ್ಕಿಳಿದ ಮೂನ್ ಮೂನ್ ಸೇನ್, ತಮ್ಮ ಪ್ರತಿಸ್ಪರ್ಧಿಯನ್ನು ಗ್ಲಾಮರ್ ಮೂಲಕವೇ ಸೋಲಿಸುವುದಾಗಿ ಹೇಳಿದ್ದರು. ಆಕೆಯ ಗ್ಲಾಮರ್ ಕಾರಣಕ್ಕೋ ಅಥವಾ ದೀದಿಯ ಪ್ರಭಾವಕ್ಕೋ ಭರ್ಜರಿ ಅಂತರದಿಂದಲೇ ಗೆಲುವು ಕಂಡಿದ್ದಾರೆ.

ನಿರೀಕ್ಷೆಗಳನ್ನು ತಲೆಕೆಳಗಾಗಿಸಿ ಚಂಡೀಗಢದಲ್ಲಿ ವಿಜಯದ ನಗೆ ಬೀರಿರುವವರು ಬಿಜೆಪಿಯ ಕಿರಣ್ ಖೇರ್. ಈ ಹಿರಿಯ ನಟಿ, ನಟ ಅನುಪಮ್ ಖೇರ್ ಅವರ ಪತ್ನಿ. ನಾಲ್ಕು ಬಾರಿ ಸಂಸದರಾಗಿದ್ದ, ಮಾಜಿ ರೈಲ್ವೇ ಸಚಿವ ಪವನ್ ಬನ್ಸಾಲ್ ಎದುರಿನ ಕಿರಣ್ ಖೇರ್ ಅವರ ಗೆಲುವು ಸಾಮಾನ್ಯದ್ದಲ್ಲ ಎನ್ನುವುದು ತಜ್ಞರ ವಿಶ್ಲೇಷಣೆ. ಕಿರಣ್ ಖೇರ್‌ರ ತಾರಾ ವರ್ಚಸ್ಸಿಗೆ ಪೈಪೋಟಿ ನೀಡುವ ಮತ್ತೊಬ್ಬ ತಾರೆಯೂ ಅವರೆದುರಿಗೆ ಸ್ಪರ್ಧಿಸಿದ್ದರು. ಆಪ್‌ನಿಂದ ಕಣಕ್ಕಿಳಿದಿದ್ದ ಗುಲ್ ಪನಾಗ್ ರತಿ ವರ್ಚಸ್ಸಿನಿಂದ ಪ್ರಸಿದ್ಧರಾದವರು. ಆದರೆ ಹಿರಿಯ ನಟಿಗೆ ಪನಾಗ್‌ರ ಅಂದ ಚೆಂದ ಸವಾಲಾಗಲೇ ಇಲ್ಲ.



ಹೇಮಾಮಾಲಿನಿ

ಬಾಲಿವುಡ್‌ನ ಅದ್ಭುತ ನಟರಲ್ಲೊಬ್ಬರು ಪರೇಶ್ ರಾವಲ್. ಅಹಮದಾಬಾದ್‌ನಿಂದ ಪರೇಶ್ ರಾವಲ್ ಸ್ಪರ್ಧಿಸುವ ಸುದ್ದಿ ಹಬ್ಬುವಾಗಲೇ ಅವರ ಗೆಲುವೂ ಖಾತ್ರಿಯಾಗಿತ್ತು. ನಟರಾಗಿ ಜನಪ್ರಿಯರಾಗಿದ್ದರೂ, ಪರೇಶ್ ರಾವಲ್ ಅವರಿಗೆ ಮತದಾರ ಅಷ್ಟು ಸುಲಭವಾಗಿ ಒಲಿಯುವ ಸಾಧ್ಯತೆ ಇರಲಿಲ್ಲ. ಆದರೆ ತಮ್ಮದೇ ಸರ್ಕಾರವಿರುವ ರಾಜ್ಯದಲ್ಲಿ ಹಾಗೂ ಬಿಜೆಪಿ ಮತಗಳ ಕೋಟೆಯಲ್ಲಿ ಕಣಕ್ಕಿಳಿದ ರಾವಲ್ ಅವರಿಗೆ ಗೆಲುವು ಅನಾಯಾಸವಾಗಿ ಒಲಿದಿದೆ. ಜನಗಳ ಸೇವೆಗೆ ಸಮಯ ಮೀಸಲಿಡುವುದಾಗಿ ಅವರು ಹೇಳಿದ್ದಾರೆ. ಅಂದರೆ, ಬಾಲಿವುಡ್ ಒಬ್ಬ ಪ್ರತಿಭಾವಂತ ಕಲಾವಿದನ ಸೇವೆಯನ್ನು ಕಳೆದುಕೊಳ್ಳುವುದು ಖಚಿತ.

ಕನಸಿನ ಕನ್ಯೆ ಹೇಮಾಮಾಲಿನಿ ಮಥುರಾ ಕ್ಷೇತ್ರದಲ್ಲಿ ಭಾರೀ ಅಂತರದ ಗೆಲುವು ಕಂಡಿದ್ದಾರೆ. ಅದೃಷ್ಟ ಪರೀಕ್ಷೆಗೆ ಒಡ್ಡಿಕೊಂಡಿದ್ದ ಹಿರಿಯ ನಟ ವಿನೋದ್ ಖನ್ನಾ ಅವರನ್ನು ಗುರುದಾಸ್‌ಪುರ ಕ್ಷೇತ್ರದ ಮತದಾರ ಒಪ್ಪಿಕೊಂಡಿದ್ದಾನೆ. ಆದರೆ ವಿನೋದ್ ಖನ್ನಾ, ರಾಜಕೀಯದ ಜತೆಗೇ ಬಣ್ಣದ ಬದುಕಿನ ಒಡನಾಟವನ್ನು ಬಿಡಲು ಸಾಧ್ಯವಿಲ್ಲ ಎಂದಿದ್ದಾರೆ.

ಬೋಜ್‌ಪುರಿ ನಟ ಮನೋಜ್ ತಿವಾರಿ ಈಶಾನ್ಯ ದೆಹಲಿಯಿಂದ



ಪರೇಶ್ ರಾವಲ್

ಬಿಜೆಪಿಯಿಂದ ಸ್ಪರ್ಧಿಸಿ ಗೆಲುವು ಕಂಡವರು. 'ಬಿಗ್ ಬಾಸ್' ಸೀರಿಯಲ್ ಮನೆಯಲ್ಲಿ ಇದ್ದದ್ದಕ್ಕಿಂತಲೂ ಹೆಚ್ಚಿನ ಸವಾಲು ಸಂಸತ್‌ನಲ್ಲಿ ಅವರಿಗೆ ಎದುರಾಗಲಿವೆ.

ಗಾಯಕರೊಬ್ಬರೂ ಸಂಸತ್ ಪ್ರವೇಶಿಸುವ ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ. ಬಾಲಿವುಡ್, ಬಂಗಾಳಿ, ಒರಿಯಾ ಸಿನಿಮಾಗಳ ಗಾಯಕ ಬಬೂಲ್ ಸುಪ್ರಿಯೊ ಪಶ್ಚಿಮ ಬಂಗಾಳದ ಅಸನ್ಸೋಲ್ ಕ್ಷೇತ್ರದಿಂದ ಜಯಿಸಿದ್ದಾರೆ. ಮಮತಾ ಬ್ಯಾನರ್ಜಿ ಪ್ರಭಾವಳಿಯ ನಡುವೆಯೂ ಅವರು ಗೆಲುವು ಕಂಡಿರುವುದಕ್ಕೆ ಮೋದಿ ಅಲೆಯೇ ಕಾರಣ ಎನ್ನುವ ಅಭಿಪ್ರಾಯವಿದೆ.

■ ಅಮಿ